ಶ್ರೀ ವೀರೇಂದ್ರ ಪಾಟೀಲ್(ಮುಖ್ಯಮಂತ್ರಿಗಳು).—

ಅ) ೬೧೭೧ ಅರ್ಜಿಗಳನ್ನು ಸ್ವೀಕರಿಸಲಾಗಿದೆ. (ಜನವರಿ ೮೮ರಿಂದ ಏಪ್ರಿಲ್ ೯೦ರವರೆಗೆ)

ಆ) ೩೭೧೮

ಇ) ೧) ಪರವಾನಗಿ ಪಡೆಯಲು ಕೊಟ್ಟಿರುವ ಕಾರಣಗಳು ತೃಪ್ತಿಕರವಾಗಿಲ್ಲ.

೨) ಆಯುಧಗಳನ್ನು ಇಡಲು ಸಂರಕ್ಷಿತವಾದ ಸ್ಥಳವಿಲ್ಲ ಹಾಗೂ ಬಂದೂಕುಗಳನ್ನು ಉಪಯೋಗಿಸಲು ಸಾಮರ್ಥ್ಯ ವಿಲ್ಲ.

೩) ಗಂಂಪುಗಾರಿಕೆ ಗ್ರಾಮಂಗಳಿಗೆ ಪರವಾನಗಿ ಪ್ರೋತ್ಸಾಹಿಸಿರುವುದಿಲ್ಲ.

ರಾಜ್ಯದಲ್ಲಿರಂವ ಬಾಲ ಕಾರ್ಮಿಕರ ಬಗ್ಗೆ

೧೩೦. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) —ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ರಾಜ್ಯದಲ್ಲಿರುವ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರಗಳ ಮಾಹಿತಿ ಒದಗಿಸುವುದು).

೨. ಈ ಅಂಕಿ ಅಂಶಗಳನ್ನು ಸಂಗ್ರಹಿಸಲು ಸರ್ಕಾರ ಯಾವಾಗ ಸಮೀಕ್ಷೆ ನಡೆಸಿದೆ ?

೩. ಬಾಲ ಕಾರ್ಮಿಕರ ಕಲ್ಯಾಣಕ್ಕೆ ಸರ್ಕಾರದ ಮುಂದೆ ಇರುವ ಕಾರ್ಯಕ್ರಮಗಳು ಯಾವುವು ?

ಶ್ರೀ ಕೆ. ಪೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

೧ ರಾಜ್ಯದಲ್ಲಿ ದುಡಿಯುತ್ತಿರುವ ಬಾಲಕಾರ್ಮಿಕರ ಸಂಖ್ಯೆಯ ಸಮೀಕ್ಷೆಯನ್ನು ಇದುವರೆವಿಗೂ ನಡೆಸಿರುವುದಿಲ್ಲ.

೨. ರಾಜ್ಯದಲ್ಲಿರುವ ಬಾಲಕಾರ್ಮಿಕರ ಸಂಖ್ಯೆಯನ್ನು ತಿಳಿಯಲು ಯಾವ ಸಮೀಕ್ಷೆಯನ್ನೂ ಈವರೆಗೆ ನಡೆಸಿರುವುದಿಲ್ಲ.

೩. ಕೇಂದ್ರ ಸರ್ಕಾರದವರು ಬಾಲಕಾರ್ಮಿಕರು ದುಡಿಯುವುದನ್ನು ತಡೆಗಟ್ಟಲು ೧೯೮೬ ರಲ್ಲಿಯೇ ಪ್ರಾಹಿಬಿಷನ್ ಆಕ್ಟ್ ೧೯೮೬ರಲ್ಲಿ ಕಾಯ್ದೆಯನ್ನು ಮಾಡಿದ್ದಾರೆ. ಅದಲ್ಲದೆ ಕಾರ್ಖಾನೆ ಕಾಯ್ದೆ, ತೋಟಗಾರಿಕೆ ಕಾಯ್ದೆ, ಬೀಡಿ ಮತ್ತು ಸಿಗಾರ್ ಕೆಲಸಗಾರರ ಕಾಯ್ದೆ ಹಾಗೂ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆಯಲ್ಲಿ ಬಾಲ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಅನುಮ ಮಾಡಲಾಗಿದೆ.

ಸಂಳ್ಳ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿನ ಸಹಕಾರಿ ಜಮೀನಿಂಗಳ ಬಗ್ಗೆ

೩೩೩. ಶ್ರೀ ಕೆ ಕುಶಾಲ (ಸಂಳ್ಳ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಂಳ್ಳ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ಈವರೆಗೆ ಅಕ್ರಮ ಸಾಗುವಳಿ ಮಾಡಿದ್ದನ್ನು ಬಿಟ್ಟು ಉಳಿದ ಸರಕಾರಿ ಜಮೀನುಗಳ ವಿಸ್ತೀರ್ಣ ಎಷ್ಟು ? ಹಾಗೂ ಸಾಗುವಳಿದಾರರ ಅಕ್ರಮ ಸಂಖ್ಯೆ ಎಷ್ಟು ?

ಆ) ಈ ರೀತಿ ಅಕ್ರಮ ಸಾಗುವಳಿ ಮಾಡಿದವರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸೇರಿದವರ ಸಂಖ್ಯೆ ಎಷ್ಟು ?

ಶ್ರೀ ಕೆ. ಪೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ)	ಸಂಳ್ಳ	ಪುತ್ತೂರು
	೪೯೧೧.೫೪ ಎಕ್ರೆ	೫೯೦೫.೧೦ ಎಕ್ರೆ
	೪೭೬೬	೩೮೩೨
ಆ)	ಪರಿಶಿಷ್ಟ ಜಾತಿ—೨೫೦	೭೯೩
	ಪರಿಶಿಷ್ಟ ಪಂಗಡ–೫೮೦	೩೭೦
	೮೩೦	೧೧೬೩